ಸರಯೂ ನದಿಯ ದಡದ ಅಯೋಧ್ಯೆಯ ಹುಡುಗ. ದಶರಥನ ಮಗ, ವಿಶ್ವಾಮಿತ್ರರೊಡನೆ ಕಾಡಿಗೆ ಬಂದಿದ್ದಾನಂತೆ. ಗೌತಮರ ಆಶ್ರಮದೊಳಕ್ಕೆ ಕಾಲಿಟ್ಟಿದ್ದರು. ಗೌತಮ ಅವರನ್ನೇ ರಾಯಭಾರಿಗಳನ್ನಾಗಿ ಮಾಡಿದ್ದ!

ಬೇರೆ ಯಾರೋ ಆಗಿದ್ದರೆ ಬೈದು ಕಳಿಸಿ ಬಿಡುತ್ತಿದ್ದಳೇನೋ ಆದರೆ, ಆ ಯುವಕ... ಶ್ರೀರಾಮಚಂದ್ರನೊಂದಿಗೆ... ಹಾಗೆ ಒರಟಾಗಿ ನಡೆದುಕೊಳ್ಳಲು ಸಾಧ್ಯವಾಗಲಿಲ್ಲ!

ಸರಿಯಾದ ಸಮಯದಲ್ಲಿ ತಾನು ಹೆತ್ತಿದ್ದರೆ, ಇವನಷ್ಟೇ ಎತ್ತರದ ಮಗ ಇರುತ್ತಿದ್ದ ತನಗೆ ಎನ್ನಿಸಿದಾಗ ಹೃದಯ ಆರ್ದ್ರವಾಗಿತ್ತು.

ಒಳಗೆ ಕರೆದೊಯ್ದು, ಕುಳ್ಳಿರಿಸಿ ಸತ್ಕರಿಸಿದ್ದಳು. ಶ್ರೀರಾಮ ತುಂಬ ಗಂಭೀರವಾಗಿ ಹೇಳಿದ್ದ–

'ಅಮ್ಮಾ, ಗೌತಮರು ನಮ್ಮನ್ನಿಲ್ಲಿಗೆ ಕಳಿಸಿದರು. ನಿಮ್ಮ ಮಧ್ಯೆ ಏನೋ ನಡೆಯಿತಂತೆ! ಗೌತಮರಿಗೆ ಅನ್ನಿಸುತ್ತಿದೆಯಂತೆ ಈಗ, ಅದರಲ್ಲಿ ತಮ್ಮ ದೋಷ ಸಹಾ ಇತ್ತು ಎಂದು. ಇನ್ನೂ ನಿಮ್ಮ ಕೋಪ ತಣಿದಿಲ್ಲವೇ? ಪತಿ ಪತ್ನಿಯ ಮಧ್ಯೆ ಹೀಗೆ ನಡೆಯುತ್ತಿರುತ್ತವೆ. ದೊಡ್ಡವರಿಗೆ ನಾನೇನು ಹೇಳುವುದಿದೆ? ಅವರು ಹೊರಟು ಹೋಗು ಎಂದೊಡನೆ ನೀವು ಬಂದೇಬಿಡಬೇಕೇ? ಆ ಆಶ್ರಮ ನಿಮ್ಮದು. ಅಲ್ಲಿರಲು ನಿಮಗೆ ಪೂರ್ಣ ಅಧಿಕಾರವಿದೆ. ಇಪ್ಪತ್ತು ವರ್ಷಗಳ ಒಂಟಿಜೀವನವೇನೂ ಸಾಮಾನ್ಯದ್ದಲ್ಲ ಅಮ್ಮಾ, ಸಣ್ಣ ವಿಷಯಕ್ಕೆ ಇಷ್ಟು ದೊಡ್ಡ ಶಿಕ್ಷೆಯನ್ನು ನಿಮಗೆ ನೀವೇ ಏಕೆ ಕೊಟ್ಟುಕೊಳ್ಳುತ್ತಿದ್ದೀರಿ? ಬನ್ನಿ, ಹೋಗೋಣ, ನಿಮ್ಮನ್ನು ಕರೆತಂದೇ ತೀರುತ್ತೇನೆ ಎಂದು ಗೌತಮರಿಗೆ ಮಾತುಕೊಟ್ಟು ಬಂದಿರುವೆ. ಅವರು ನಿಮ್ಮ ಹಾದಿ ಕಾಯುತ್ತಾ ಇರುತ್ತಾರೆ. ನಡೆಯಿರಿ ಅಮ್ಮಾ!'

> ಇಂದ್ರ ಪತಿಯ ವೇಷಧರಿಸಿ, ತನ್ನನ್ನು ಮೋಸಗೊಳಿಸಿ ಸಮೀಪಿಸಿದ್ದೇನೋ ನಿಜ. ಆದರೆ... ತನಗೆ ಗೊತ್ತಾಗಿತ್ತಲ್ಲ ಅವನು ತನ್ನ ಪತಿಯಲ್ಲವೆಂದು? ಈ ಸಮಯದಲ್ಲಿ ತಾನು ಸತ್ಯವನ್ನೇ ಹೇಳಬೇಕು. ಅದೆಷ್ಟೇ ಕಠೋರವಾಗಿದ್ದರೂ... ಅಹಲ್ಯೆ ತನ್ನೊಳಗನ್ನು ಬಿಚ್ಚಿಕೊಳ್ಳುವವಳಂತೆ ಮಾತಾಡತೊಡಗಿದಳು...

ಅಹಲ್ಯೆ ಮುಗ್ಧವಾಗಿ ಕೇಳಿದ್ದಳು ಶ್ರೀರಾಮನ ಮಾತುಗಳನ್ನು. ತನ್ನ ವಯಸ್ಸಿಗಿಂತಲೂ ಎಷ್ಟೋ ಹಿರಿಯನಂತೆ ಮಾತಾಡಿದ್ದ. ಎಂಥ ಗಾಂಭೀರ್ಯ ಮಾತಿನಲ್ಲಿ! ಎಂಥ ತೇಜಸ್ಸು ಮುಖದಲ್ಲಿ!

ಅವನು ಹೇಳಿದ್ದರಲ್ಲೂ ಸತ್ಯಾಂಶವಿತ್ತು. ಗೌತಮ 'ತೊಲಗು' ಎಂದೊಡನೆ ತಾನು ಬಂದುಬಿಡಬಾರದಿತ್ತು. ಎಷ್ಟು ದಿನ ಹೀಗೇ ಒಂಟಿ ಬದುಕು? ಕಾಡಿನ ಮಧ್ಯೆ, ಕಾರಿರುಳಿನಲ್ಲಿ ಕ್ರೂರ ಮೃಗಗಳಿಗೆ, ಹಗಲಿನಲ್ಲಿ ಇಂದ್ರನಂಥ ಕಾಮುಕರಿಗೆ ಅಂಜುತ್ತಲೇ ಬದುಕುವುದರಲ್ಲಿ ತನಗಾದರೂ ಏನು ಸುಖ? ಮುಂದೆ ವಾದ ಮಾಡಲು ಹೋಗದೆ, ಶ್ರೀರಾಮಚಂದ್ರ, ಲಕ್ಷ್ಮಣರೊಂದಿಗೆ ನಡೆದುಬಂದಳು, ಪತಿ ಆಶ್ರಮಕ್ಕೆ!

ನಿಜಕ್ಕೂ ಗೌತಮರು ಹಾದಿ ನೋಡುತ್ತಿರುವಂತೆ ಕಂಡಿತ್ತು.

ಆಶ್ರಮದ ಜೀವನ ಮತ್ತೆ ಆರಂಭವಾಗಿತ್ತು.

ಕೆಲವೊಮ್ಮೆ ಶೀಘ್ರವಾಗಿ, ಕೆಲವೊಮ್ಮೆ ದೀರ್ಘವಾಗಿ ಉರುಳಿದವು ದಿನಗಳು. ನಿಃಸ್ಸಾರ ಬದುಕಿಗೆ ಸಾರ ತುಂಬಿಕೊಳ್ಳಲು ಹೆಣ್ಣುಮಗು ಒಂದನ್ನು ಪಡೆದು, 'ಶ್ವೇತಾಂಬರೀ' ಎಂದು ಹೆಸರಿಟ್ಟು ತುಂಬ ಅಕ್ಕರೆ, ವಾತ್ಸಲ್ಯಗಳಿಂದ ಪೋಷಿಸಿದಳು. ಗೌತಮರು ಯಾವುದಕ್ಕೂ ಅಡ್ಡಿಪಡಿಸಲಿಲ್ಲ.